

ಹತ್ತಿದೆಯೆಂದೇ ಅರ್ಥ! ಅವಳ್ಯಾಕೆ ಅವನು ಹುಯ್ಯುವ ಅಚ್ಚಲ್ಲಿ ಮುದುರಿ ಕುಳಿತುಕೊಳ್ಳಬೇಕು? ಅವಳು ಅವನ ಸ್ನೇಹವನ್ನು, ಕುಟುಂಬವನ್ನು, ಅವನ ಪ್ರೀತಿಯನ್ನು, ಜಾಣತನವನ್ನು, ಹುಂಬತನವನ್ನು, ಎದೆಯಲ್ಲಿ ಕಾಪಿಡುವಂಥ ಹೆಣ್ಣು. ಅವಳನ್ನು ನೋಯಿಸಿದರೆ ಖಂಡಿತ ಅವನು ರೌರವ ನರಕಕ್ಕೇ ಹೋಗುತ್ತಾನೆ. ಅರಿವಿಲ್ಲದೆ ಗಂಡಸರು ಮಾಡುವ ಇಂಥ ದುಡುಕಿನಿಂದಲೇ ನರಕ ಉಂಟಾಗುತ್ತದೆ. ಪಾಪದ ಕೊಡಗಳು ಈ ಭೂಮಿಯ ಮೇಲೆ ತುಂಬಿತುಂಬಿ ತುಳುಕುತ್ತವೆ.

ಪ್ರೀತಿ ಹೊಳೆಯನ್ನೇ ತಂದು ಅದರ ಮೇಲೆ ಹರಿಸಿದರೂ ಆ ಪಾಪದ ಕೊಡಗಳ ದುಃಖವನ್ನ ಯಾರೂ ತೊಳೆಯಲಾರರು. ಬಾಣ ಹೂಡುವವನಿಗೆ ಗುರಿಯ ಪ್ರಜ್ಞೆಯಿಲ್ಲದಿದ್ದರೆ ಅರೆಜೀವಗಳು ಅಂತರ ಪಟಲದಲ್ಲಿ ತಲ್ಲಣಿಸುತ್ತಿರುತ್ತವೆ. ಇಂಥ ಒಂದು ತಲ್ಲಣ ಜಗದ ತಲ್ಲಣವಾಗುವಂತೆ ವಿಸ್ತರಿಸುತ್ತ ಹೋಗಿ ಕೊನೆಗೆ ಜಗತ್ತು ನಾಶವಾಗುವ ಹಂತ ತಲುಪಿಬಿಡುತ್ತದೆ. ಪ್ರೀತಿಯ ಸುರುಳಿ ಮೈಯಿಂದ ಮನಸ್ಸಿಗೆ ಒಳಮುಖವಾಗಿ ಚಲಿಸಿ ಮನಸ್ಸಿಂದ ಮೈಯಿಗೆ ಹೊರಮುಖವಾಗಿಯೂ ಚಲಿಸಬಲ್ಲುದು. ಹಾಗೆಯೇ ದುಃಖವೂ... ಆದರೆ ವ್ಯತ್ಯಾಸ ಇಷ್ಟೇ... ಪ್ರೀತಿ ಒಲಿದವರನ್ನು ಹೊಸಹುಟ್ಟೊಂದನ್ನು ಹಾಕುತ್ತಾ ದಡ ಸೇರಿಸಿದರೆ ದುಃಖದ ತಲ್ಲಣ ಇದ್ದಲ್ಲೇ ವಿಸ್ತರಿಸಿ, ನಡುನೀರಿನಲ್ಲೇ ಮುಳುಗಿಸುವಂಥದ್ದು. ಅಡಿಗೆ ಮನೆಯ ಕೆಟಲ್ ತೆಗೆದು ನೋಡಿದೆ. ಎಂದಿನಂತೆ ಬಿಸಿ ಕಾಫಿ ಬೆರೆಸಿ ಸಂಭ್ರಮ, ಸುರುವಿಟ್ಟು ಹೋಗಿದ್ದಳು.

ಫೋನ್ ಸದ್ದು. ಸಂಭ್ರಮ, ''ಹೇಮೂ, ಏನ್ ಗೊತ್ತಾ? ಈಶ ಫೋನ್ ಮಾಡಿದ್ದ. 'ನಾಳಿದ್ದು ಬಾಂಬೆ ಹೋಗ್ಬೇಕು. ಸಂಜೆ ನಿಮ್ಮನೆ ಕಡೆ ಕೆಲ್ಸ ಇದೆ, ಬರ್ತೀನಿ' ಅಂತ. ನಾನೂ ಹೂಂ ಅಂದಿದೀನಿ'' ಅಂತ ನಗುತ್ತ ಹೇಳಿದಳು.